ಮಂಗಳೂರು ತಾಲ್ಲೂಕಿನ ಪರಿಶಿಷ್ಟ ವರ್ಗ ಮತ್ತು ಜನಾಂಗದವರಿಗೆ ಭೂನ್ಯಾಯ ಮಂಡಳಿಯಿಂದ ಭೂ ಹಿಡುವಳಿ ಸಿಕ್ಕಿರುವುದು

೧೮೪೬. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ನೀರಾವರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬-೮೭, ೧೯೮೭-೮೮ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕು ಭೂ ನ್ಯಾಯ ಮಂಡಳಿಯಿಂದ ಭೂ ಹಿಡುವಳಿ ಸಿಕ್ಕಿರುವ ಪರಿಶಿಷ್ಟ ವರ್ಗ ಮತ್ತು ಜನಾಂಗದವರ ಸಂಖ್ಯೆ ಎಷ್ಟು?

ಆ) ಈ ಅವಧಿಯಲ್ಲಿ ಸದರಿ ಹಿಡುವಳಿಗೆ ಪರಿಶಿಷ್ಟ ವರ್ಗದವರಿಂದ ಸಲ್ಲಿಸಿದ ಅರ್ಜಿಗಳೆಷ್ಟು?

ಇ) ಆ ಪೈಕಿ ಪುರಸ್ಕರಿಸಿದ ಮತ್ತು ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಮತ್ತು ಭಾರಿ ನೀರಾವರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

	೧೯೮೬-೮೭	೧೯೮೭-೮೮
ಅ)	೨೧	೨೯೯
ಆ)	೧೯೮೬-೮೭	೧೯೮೭-೮೮
	ಇಲ್ಲ	ಇಲ್ಲ

ಇ) (ಅ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜೆ.ಎಸ್. ಆಚಾರ್ (ಶ್ರೀ ಬಿ.ಎಂ. ಇದಿನಬ್ಬರವರ ಪರವಾಗಿ).—ಮಂಗಳೂರು ಭೂನ್ಯಾಯ ಮಂಡಲಿಯಲ್ಲಿ ತನಿಖೆಗಾಗಿ ಬಾಕಿ ಇರುವ ಅರ್ಜಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರ ಅರ್ಜಿಗಳು ಒಟ್ಟು ಎಷ್ಟು ಬಾಕಿ ಇವೆ? ಮತ್ತು ಎಷ್ಟು ವರ್ಷಗಳಿಂದ ಬಾಕಿ ಇವೆ? ಇನ್ನಾದರೂ ತನಿಖೆಗೆ ಆದ್ಯತೆ ನೀಡಲಾಗುವುದೆ? ಭೂನ್ಯಾಯ ಮಂಡಲಿಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರ ಅರ್ಜಿಗಳು ತಿರಸ್ಕಾರವಾಗಿ ಆ ಜನಾಂಗದವರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಸ್.ಆರ್. ಬೊಮ್ಮಾಯಿ —ನನ್ನಲ್ಲಿ ಈಗ ಪರಿಶಿಷ್ಟ ಜಾತಿ ಮತ್ತು ವರ್ಗದವರ ಅರ್ಜಿಗಳು ಎಷ್ಟಿವೆ ಎಂಬ ಮಾಹಿತಿ ಇಲ್ಲ. ಅರ್ಜಿಯಲ್ಲಿ ಜಾತಿಯ ಸೂಚನೆ ಇರುವುದಿಲ್ಲ ಆದರೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದನ್ನು ವಿಚಾರ ಮಾಡುತ್ತೇನೆ ಮತ್ತು ಭೂನ್ಯಾಯ ಮಂಡಲಿಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಪ್ರಾಶಸ್ತ್ಯ ಕೊಟ್ಟು ಅವರ ಅರ್ಜಿಗಳನ್ನು ನಿರ್ಣಯ ಮಾಡಲಿಕ್ಕೆ ತಿಳಿಸುತ್ತೇನೆ.

ಗಿರಿ ಜನ ಕಲ್ಯಾಣ ಯೋಜನೆ ಮತ್ತು ಜೇನು ಕುರುಬರ ಕಲ್ಯಾಣ ಕಛೇರಿಯ ಬಗ್ಗೆ

೧೦೨೫. ಶ್ರೀಮತಿ ಸುಮಾ ಮಂತ. (ವಿರಾಜಪೇಟೆ) :—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿರಾಜಪೇಟೆ ಕ್ಷೇತ್ರವು ಗಿರಿಜನರಿರುವ ಕ್ಷೇತ್ರವಾಗಿದ್ದು ಇಲ್ಲಿನ ಗಿರಿಜನ ಕಲ್ಯಾಣ ಕಛೇರಿಗಳು ಹುಣಸೂರಿನಲ್ಲಿರುವುದು ನಿಜವೇ

ಆ) ಹಾಗಿದ್ದಲ್ಲಿ, ಸ್ಥಳೀಯ ಗಿರಿಜನರಿಗೆ ಇದರ ಉಪಯೋಗ ದೊರಕದೆ ಅದರ ದುರುಪಯೋಗ ವಾಗುತ್ತಿರುವ ಕಾರಿತು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ದುರುಪಯೋಗದ ಬಗ್ಗೆ ಮತ್ತು ಸದರಿ ಕಛೇರಿಗಳನ್ನು ವಿರಾಜಪೇಟೆಗೆ ವರ್ಗಾಯಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಜೇನು ಕುರುಬರ ಕಲ್ಯಾಣ ಅಧಿಕಾರಿಯವರ ಕಛೇರಿ ಮಾತ್ರ ಹುಣಸೂರಿನಲ್ಲಿರುತ್ತದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಶ್ರೀಮತಿ ಸುಮಾ ವಸಂತ ಅವರ ಪರವಾಗಿ).—ಜೇನು ಕುರುಬರು ಹೆಚ್ಚಾಗಿ ಕೊಡಗು ಜಿಲ್ಲೆಯಲ್ಲಿರತಕ್ಕವರು. ಎಲ್ಲಿ ರಿಸರ್ವ್ ಕಾನ್ಸ್‌ಟ್ಯೂಯನ್ಸಿ ಇದೆ ಅಲ್ಲಿ ಅವರ ಪಾಪ್ಯುಲೇಷನ್ ಜಾಸ್ತಿ ಇದೆ ಎಂದು ಅರ್ಥ. ಅವರಿಗೆ ಹುಣಸೂರು ಕಚೇರಿ ದೂರ ವಾಗುತ್ತದೆ. ಆದ್ದರಿಂದ ಅದನ್ನು ವಿರಾಜಪೇಟೆಗೆ ಏತಕ್ಕೆ ಷಿಫ್ಟ್ ಮಾಡಬಾರದು? ಅಥವಾ ಅಲ್ಲೇ ಇನ್ನೊಂದು ಕಚೇರಿಯನ್ನು ಏಕೆ ತೆರೆಯಬಾರದು?

ಶ್ರೀ ಜಿ. ಬಸವಣ್ಣಪ್ಪ.—ಜೇನು ಕುರುಬರು ಏನಿದ್ದಾರೆ ಇವರು ಮೂಲ ನಿವಾಸಿಗಳು, ಅವರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ವಿಶೇಷ ಗಮನಹರಿಸಿದೆ. ಅವರನ್ನು ಬಡತನ ರೇಖೆಯಿಂದ ಮೇಲೆ ಎತ್ತಬೇಕಾದರೆ ಮತ್ತು ಅವರಿಗೆ ಶಿಕ್ಷಣ ಕೊಡಬೇಕಾದರೆ ಪ್ರತ್ಯೇಕ ಕಚೇರಿ ಗಳನ್ನು ತೆರೆದಿದ್ದೇವೆ. ಜೇನು ಕುರುಬರು ಹೆಚ್ಚಾಗಿ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿದ್ದಾರೆ, ಇವೆರಡು ಜಿಲ್ಲೆಗಳ ಮಧ್ಯೆ ಹುಣಸೂರು ಕೇಂದ್ರ ಸ್ಥಳ ಎಂದು ಭಾವಿಸಿ ಅಲ್ಲಿ ಕಚೇರಿಯನ್ನು ತೆರೆದಿದೆವೆ. ಅಲ್ಲಿ ಕೆಲಸ ನಡೆಯುತ್ತಿದೆ.

ಯಾದಗಿರಿ ತಾಲ್ಲೂಕು ಭೂನ್ಯಾಯ ಮಂಡಳಿಯ ಇತ್ಯರ್ಥವಾದ ಪ್ರಕರಣದ ಬಗ್ಗೆ

೨೫೦೭. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :—ಮಾನ್ಯ ಕಂದಾಯ ಯೋಜನಾ ಹಾಗೂ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯಾದಗಿರಿ ತಾಲ್ಲೂಕು ಭೂನ್ಯಾಯ ಮಂಡಳಿಯಲ್ಲಿ ಕಳೆದ ಮೂರು ವರ್ಷಗಳಿಂದ ಇತ್ಯರ್ಥ ವಾದ ಪ್ರಕರಣಗಳೆಷ್ಟು ?

ಆ) ಗೇಣಿದಾರರ ಪರವಾಗಿ ಮತ್ತು ವಿರುದ್ಧವಾಗಿ ತೀರ್ಮಾನವಾದ ಪ್ರಕರಣಗಳೆಷ್ಟು ?

ಇ) ಯಾದಗಿರಿ ಭೂನ್ಯಾಯ ಮಂಡಳಿಯು ರೈತ ಸ್ವಾಧೀನಕ್ಕೆ ತೆಗೆದುಕೊಂಡ ಹೆಚ್ಚುವರಿ ಭೂಮಿ ಮತ್ತು ಸರ್ಕಾ ಹೆಚ್ಚುವರಿ ಭೂಮಿಯನ್ನು ಬಡಜನರಿಗೆ ಕಳೆದ ಮೂರು ವರ್ಷಗಳಿಂದ ವಿತರಣೆ ಮಾಡುವುದರ ಬಗ್ಗೆ.

ಈ) ಯಾದಗಿರಿ ತಾಲ್ಲೂಕು ಭೂನ್ಯಾಯ ಮಂಡಳಿಯು ಮಾಡಿರುವ ಕೆಲಸದಿಂದ ಆದ ಅನ್ಯಾಯದ ಬಗ್ಗೆ ಸರ್ಕಾರದ ಗಮನಕ್ಕೆ ದೂರುಗಳೇನಾದರೂ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಭಾರಿ ನೀರಾವರಿ ಸಚಿವರು) :—

ಅ) ಇತ್ಯರ್ಥವಾದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

ವರ್ಷ	ಕಲಂ ೪೮ ರ ಅಡಿಯಲ್ಲಿ	ಕಲಂ ೪೮ ಎ ಅಡಿಯಲ್ಲಿ	ಕಲಂ ೬೬ ರ ಅಡಿಯಲ್ಲಿ (ಹೆಚ್ಚುವರಿ ಭೂಮಿ)	ಇನಾಂ ಪ್ರಕರಣಗಳು
೧೯೮೫-೮೬	ಇಲ್ಲ	ಇಲ್ಲ	೧೮	೫೪
೧೯೮೬-೮೭	ಇಲ್ಲ	ಇಲ್ಲ	೬೫	೩೪
೧೯೮೭-೮೮	ಇಲ್ಲ	ಇಲ್ಲ	೧೦	೭೫